**ಬೆಂ.ಮ.ಸಾ.ಸಂಸ್ಥೆಯ ಎಲೆಕ್ಟ್ರಿಕ್ ಬಸ್ಸುಗಳ ಟೆಂಡರ್‌ನ ಮಿಥ್ಸ್ ಹಾಗೂ ಸತ್ಯಾಂಶದ ಬಗ್ಗೆ.**

**ಹಿನ್ನೆಲೆ:**

ಬೆಂ.ಮ.ಸಾ.ಸಂಸ್ಥೆಯ ವಿದ್ಯುತ್ ಬಸ್ಸುಗಳ ಟೆಂಡರ್ ಬಗ್ಗೆ ಮುದ್ರಣ ಹಾಗೂ ದೃಶ್ಯ ಮಾಧ್ಯಮಗಳಲ್ಲಿ ಸಾರಿಗೆ ಸಚಿವರ ಹೇಳಿಕೆಯ ಬಗ್ಗೆ ಟೆಂಡರ್ ಪ್ರಕ್ರಿಯೆಯಲ್ಲಿ ನ್ಯೂನ್ಯತೆಗಳು ಇರುವುದಾಗಿ ವರದಿಯಾಗಿರುವುದು ಆಘಾತಕಾರಿ ವಿಷಯವಾಗಿರುತ್ತದೆ. ಕೆಲವು ಎಲೆಕ್ಟ್ರಾನಿಕ್ ಮಾಧ್ಯಮಗಳು ಸಚಿವರ ಹೇಳಿಕೆಯ ಬಗ್ಗೆ ವ್ಯಂಗ್ಯವಾಗಿ ಪ್ರಸರಣಗಳನ್ನು ಮಾಡುತ್ತಾ ವಾರ್ತಾ ವಿಷಯಗಳನ್ನು ತಪ್ಪಾಗಿ ಹಾಗೂ ಸತ್ಯಕ್ಕೆ ದೂರವಾಗಿ ಪ್ರಸಾರ ಮಾಡಿರುತ್ತವೆ. ಇದರೊಂದಿಗೆ ಸಂಸ್ಥೆಯ ಅಧಿಕಾರಿಗಳು ಹಾಗೂ ವ್ಯವಸ್ಥಾಪಕ ನಿರ್ದೇಶಕರ ವಿರುದ್ದ ಅನಗತ್ಯ ಹಾಗೂ ಸೂಕ್ತವಲ್ಲದ ಭಾಷೆಯನ್ನು ಬಳಸಿರುತ್ತವೆ. **ಬೆಂ.ಮ.ಸಾ.ಸಂಸ್ಥೆಯು ಎಲೆಕ್ಟ್ರಿಕ್ ಬಸ್ಸುಗಳನ್ನು ಸೇರ್ಪಡೆಗೊಳಿಸಲು ಆಹ್ವಾನಿಸಿರುವ ಟೆಂಡರ್‌ನ ಬಗ್ಗೆ ತಪ್ಪು ಹಾಗೂ ಸ್ವ-ವ್ಯಾಖ್ಯಾನಿಕ ಮಾಹಿತಿಗಳನ್ನು ನೀಡಿರುವುದು ಪ್ರತ್ಯೇಕವಾಗಿ ತಿಳಿಸಬೇಕಿರುವುದಿಲ್ಲ.**

ಸಂಬಂಧಪಟ್ಟ ಟಿ.ವಿ ಚಾನೆಲ್‌ಗೆ ಸಮಜಾಯಿಷಿಯನ್ನು ಕೋರಿ ಕಾನೂನಿನ ಮುಖಾಂತರ ನೋಟಿಸನ್ನು ಜಾರಿ ಮಾಡಲಾಗಿದ್ದು, ಸಾರ್ವಜನಿಕರು ಈ ಸಂಬಂಧ ಸತ್ಯಸಂಗತಿಯನ್ನು ತಿರುಚಿ ಪ್ರಸಾರ ಮಾಡಿರುವ ವಾರ್ತಾ ವಿಷಯಗಳ ಬಗ್ಗೆ ಅಗತ್ಯ ಮಾಹಿತಿಗಳನ್ನು ಹಾಗೂ ಸತ್ಯಾಂಶವನ್ನು ತಿಳಿದುಕೊಳ್ಳಲು ಅನುಕೂಲವಾಗುವ ಬಗ್ಗೆ ಕ್ರಮಜರುಗಿಸಿ ಸೂಕ್ತ ಮಾಹಿತಿಗಳನ್ನು ನೀಡುವುದು ಸಮಂಜಸವೆಂದು ಅಭಿಪ್ರಾಯಕ್ಕೆ ಬರಲಾಗಿದೆ. ಆದ್ದರಿಂದ ಬೆಂ.ಮ.ಸಾ.ಸಂಸ್ಥೆಯು ಎಲೆಕ್ಟ್ರಿಕ್ ಬಸ್ಸುಗಳ ಸೇರ್ಪಡೆಗೆ ಆಹ್ವಾನಿಸಿರುವ ಟೆಂಡರ್ ಪ್ರಕ್ರಿಯೆಯ ಸಂಪೂರ್ಣ ಮಾಹಿತಿಯನ್ನು ಆಸಕ್ತರಿಗೆ ತಿಳಿಸುವ ಸಲುವಾಗಿ ಎಲ್ಲಾ ಪ್ರಮುಖ ಟೆಂಡರ್ ದಸ್ತಾವೇಜುಗಳ ಪ್ರತಿಯನ್ನು ಸ್ಕ್ಯಾನ್ ಮಾಡಿ ಪೂರ್ಣ ಟೆಂಡರ್ ಪ್ರಕ್ರಿಯೆಯು ಪಾರದರ್ಶಕತೆಯಿಂದ ಕೂಡಿರುವ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವ ಸಲುವಾಗಿ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಲಭ್ಯವಾಗುವ ಹಾಗೆ ಕ್ರಮಜರುಗಿಸಲಾಗಿರುತ್ತದೆ.

**ಪ್ರಕರಣದ ಸತ್ಯಾಂಶ:**

01. ಬೆಂ.ಮ.ಸಾ.ಸಂಸ್ಥೆಯು ಎಲೆಕ್ಟ್ರಿಕ್ ಬಸ್ಸುಗಳ ಅಳವಡಿಕೆಯ ಬಗ್ಗೆ ಪ್ರಾಯೋಗಿಕ ಆಚರಣೆಗೆ, ಗುತ್ತಿಗೆ ಆಧಾರದ ಮೇಲೆ ಅಥವಾ ಖರೀದಿ ಮಾಡುವ ಬಗ್ಗೆ, ಮಂಡಳಿ ನಿರ್ದೇಶಕರ ಒಪ್ಪಿಗೆ ಹಾಗೂ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಮತ್ತು ಟೆಂಡರ್ ದಸ್ತಾವೇಜುಗಳ ತಯಾರಿಯ ಪ್ರಕ್ರಿಯೆಯು ಪ್ರಸ್ತುತ ವ್ಯವಸ್ಥಾಪಕ ನಿರ್ದೇಶಕರನ್ನು ಸಂಸ್ಥೆಗೆ ನಿಯೋಜಿಸುವ ಪೂರ್ವದಲ್ಲಿ ಅಂದರೆ ದಿನಾಂಕ.21.10.2016 ರ ಹಿಂದೆಯೆ ಪ್ರಾರಂಭಗೊಂಡಿರುತ್ತದೆ.

    - ರಾಜ್ಯ ಸಚಿವ ಸಂಪುಟವು ಬೆಂ.ಮ.ಸಾ.ಸಂಸ್ಥೆಯು ಒಟ್ಟು 3,000 ಬಸ್ಸುಗಳ ಅಳವಡಿಕೆಯಲ್ಲಿ 1,500 ಬಸ್ಸುಗಳ ಖರೀದಿ ಹಾಗೂ 1,500 ಬಸ್ಸುಗಳನ್ನು ಗುತ್ತಿಗೆ ಆಧಾರದ ಮೇಲೆ ಪಡೆಯಲು ಘೋಷಣೆಯನ್ನು ಮಾಡಿರುತ್ತದೆ. ಆದರೆ, ರಾಷ್ಟ್ರೀಯ ಹಸಿರು ಪ್ರಾಧಿಕಾರವು ಬೆಂ.ಮ.ಸಾ.ಸಂಸ್ಥೆಯು "ಹಸಿರು ಇಂಧನ"ದ ಬಳಕೆಯ ಮೂಲಕ ಬೆಂಗಳೂರು ನಗರದಲ್ಲಿ ಪರಿಸರ ಮಾಲಿನ್ಯವನ್ನು ಕಡಿಮೆಗೊಳಿಸುವ ಸಲುವಾಗಿ ಡೀಸೆಲ್ ಬಸ್ಸುಗಳ ಖರೀದಿಗೆ ಮಧ್ಯಂತರ ತಡೆಯಾಜ್ಞೆಯನ್ನು ನೀಡಿರುತ್ತದೆ.
    - ಬೆಂ.ಮ.ಸಾ.ಸಂಸ್ಥೆಯು "ಹಸಿರು ಇಂಧನ"ದ ಬಳಕೆಯ ಅನ್ವೇಷಣೆಯ ಸಾಧ್ಯತೆಗಳ ಬಗ್ಗೆ ಅವಲೋಕಿಸುತ್ತಿದ್ದ ಹಂತದಲ್ಲಿ ಕೇಂದ್ರ ಸರ್ಕಾರದ ಭಾರಿ ಕೈಗಾರಿಕಾ ಇಲಾಖೆಯು ಶೇ 60 ರಷ್ಟು ಪ್ರೋತ್ಸಾಹ ಧನವನ್ನು ನೀಡುವ ಫೇಮ್ (ಫಾಸ್ಟರ್ ಅಡಾಪ್ಷನ್ ಆಫ್ ಮ್ಯಾನುಫಾಕ್ಚರಿಂಗ್ ಅಫ್ ಎಲೆಕ್ಟ್ರಿಕ್ ವೆಹಿಕಲ್ಸ್) ಸ್ಕೀಮ್ ಅನ್ನು ಘೋಷಣೆ ಮಾಡಿರುತ್ತದೆ.
    - ರಾಜ್ಯ ಸರ್ಕಾರವು ಸಹ 2017-18 ನೇ ಸಾಲಿನ ಆಯವ್ಯಯದಲ್ಲಿಯೂ ಕೇಂದ್ರ ಸರ್ಕಾರದ ಆರ್ಥಿಕ ಸಹಾಯದೊಂದಿಗೆ 150 ಎಲೆಕ್ಟ್ರಿಕ್ ಬಸ್ಸುಗಳ ಅಳವಡಿಕೆಯ ಬಗ್ಗೆ ಘೋಷಣೆಯನ್ನು ಮಾಡಿರುತ್ತದೆ.

- ಅದರಂತೆ, ಬೆಂ.ಮ.ಸಾ.ಸಂಸ್ಥೆಯು 150 ಎಲೆಕ್ಟ್ರಿಕ್ ಬಸ್ಸುಗಳನ್ನು ಒಟ್ಟು ವೆಚ್ಚದ ಮಾದರಿ (Gross cost Model) ಮೇಲೆ ಕೇಂದ್ರ ಸರ್ಕಾರದ ಫೇಮ್ ಸ್ಕೀಮ್‌ನ ಮಾರ್ಗಸೂಚಿಯಂತೆ ಆಚರಣೆ ಮಾಡಲು ಟೆಂಡರ್ ಆಹ್ವಾನಿಸಿರುತ್ತದೆ.

ಹೀಗಾಗಿ ಬೆಂ.ಮ.ಸಾ.ಸಂಸ್ಥೆಯು ಸರ್ಕಾರದ ನೀತಿ ಹಾಗೂ ರಾಜ್ಯ ಸರ್ಕಾರದ ಆಯವ್ಯಯ ಘೋಷಣೆಯನ್ನು ಸಮರ್ಪಕ ರೀತಿಯಲ್ಲಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕ್ರಮ ಜರುಗಿಸಿರುತ್ತದೆ.

02. ಮಾರುಕಟ್ಟೆ ಸಾಮರ್ಥ್ಯ ಹಾಗೂ ವಿವಿಧ ಪಾಲುದಾರರಿಂದ ಹೊರಹೊಮ್ಮುವ ಅಭಿಪ್ರಾಯಗಳನ್ನು ತಿಳಿಯುವ ಸಲುವಾಗಿ ಬೆಂ.ಮ.ಸಾ.ಸಂಸ್ಥೆಯು ಎಲೆಕ್ಟ್ರಿಕ್ ಬಸ್ಸುಗಳ ತಯಾರಕರು, ಆಪರೇಟರ್‌ಗಳು ಹಾಗೂ ರಾಷ್ಟ್ರದ ವಿವಿಧ ಸಾರಿಗೆ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಒಂದು ದುಂಡು ಮೇಜಿನ ಸಮ್ಮೇಳನವನ್ನು ದಿನಾಂಕ 22.12.2017 ರಂದು ಆಯೋಜಿಸಿರುತ್ತದೆ. ಈ ಹಿಂದೆ ಸಂಸ್ಥೆಯಲ್ಲಿ ಗುತ್ತಿಗೆ ಆದಾರದ ಮೇಲೆ ಬಸ್ಸುಗಳನ್ನು ಆಚರಣೆ ಮಾಡಿದ್ದ ಸಂದರ್ಭದಲ್ಲಿ ಗುತ್ತಿಗೆಯಲ್ಲಿ ಆದಂತಹ ವಿಫಲತೆಗಳ ಬಗ್ಗೆ ಕಾರಣಗಳನ್ನು ಹಾಗೂ ಸೂಕ್ತ ಪರಿಹಾರ ಕ್ರಮಗಳ ಬಗ್ಗೆ ಅವಲೋಕಿಸಿ ಅವುಗಳನ್ನು ಟೆಂಡರ್ ದಸ್ತಾವೇಜುಗಳಲ್ಲಿ ಸೇರಿಸುವ ಬಗ್ಗೆ ಕ್ರಮ ಜರುಗಿಸಲಾಗಿರುತ್ತದೆ.

  - ಮೇಲಿನ ಕ್ರಮಗಳ ಪ್ರತಿಕ್ರಿಯೆಯನ್ನು ಹಾಗೂ ಎಲೆಕ್ಟ್ರಿಕ್ ಬಸ್ಸುಗಳ ತಂತ್ರಜ್ಞಾನವು ದೇಶದಲ್ಲಿ ಹೊಸದಾಗಿದ್ದು, ವಿಕಸನವಾಗುತ್ತಿರುವ ಹಿನ್ನೆಲೆಯಲ್ಲಿ ಮತ್ತು ಅವುಗಳ ಉತ್ಪಾದನೆಯನ್ನು ಭಾರತದ ತಯಾರಕರಿಂದ ವಿರಳವಾಗಿರುವ ಹಿನ್ನೆಲೆಯಲ್ಲಿ ಬೆಂ.ಮ.ಸಾ.ಸಂಸ್ಥೆಯು ಎಲೆಕ್ಟ್ರಿಕ್ ಬಸ್ಸುಗಳನ್ನು ಒಟ್ಟು ವೆಚ್ಚದ ಮಾದರಿ (Gross cost Model) ಅನ್ನು ಶೇ.100 ರಷ್ಟು ವೈಫಲ್ಯ ಮುಕ್ತವಾಗಿಸುವ ಉದ್ದೇಶದಿಂದ ಆಯ್ಕೆ ಮಾಡಲಾಗಿರುತ್ತದೆ. ಅದರಂತೆ, ಟೆಂಡರ್ ದಸ್ತಾವೇಜುಗಳನ್ನು ತಯಾರಿಸಿ ಅತ್ಯಂತ ಪಾರದರ್ಶಕ ಟೆಂಡರ್ ಪ್ರಕ್ರಿಯೆಯನ್ನು ಅನುಸರಿಸಲಾಗಿರುತ್ತದೆ.

  - ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸುಮಾರು 9 ತಿಂಗಳ ಕಾಲಾವಕಾಶವು ತಗಲಿರುತ್ತದೆ.

  - ಬೆಂ.ಮ.ಸಾ.ಸಂಸ್ಥೆಯ ಟೆಂಡರ್‌ನಲ್ಲಿ 6 ಬಿಡ್ಡುದಾರರು ಭಾಗವಹಿಸಿದ್ದು ಬಲವಾದ ಬಿಡ್ ಸ್ಪರ್ಧೆಯು ಏರ್ಪಟ್ಟಿರುತ್ತದೆ.

  - ಇದೇ ರೀತಿ ಇತರೇ ನಗರಗಳಾದ ಹೈದರಾಬಾದ್, ಮುಂಬೈ ಹಾಗೂ ಅಹಮದಬಾದ್ ಗಳಲ್ಲಿ ಟೆಂಡರ್ ಆಹ್ವಾನಿಸಿದ್ದು ಅವುಗಳು ಸಹ ಗುತ್ತಿಗೆ ಆಧಾರದ ಮೇಲೆ ಆಚರಣೆಯನ್ನು ಆಯ್ಕೆಮಾಡಿರುತ್ತವೆ.

03. ಬೆಂ.ಮ.ಸಾ.ಸಂಸ್ಥೆಯು ದೇಶದಲ್ಲೇ ಅತಿ ಕನಿಷ್ಠವಾದ ಬಿಡ್ ಅಂದರೆ ಪ್ರತಿ ಕಿ.ಮೀ ಗೆ ರೂ.37.35 ನ್ನು ಪಡೆದಿದ್ದು ಹೈದರಾಬಾದ್‌ನಲ್ಲಿ ರೂ.43.00, ಮುಂಬೈನಲ್ಲಿ ರೂ.55.00 ಹಾಗೂ ಅಹಮದಬಾದ್‌ನಲ್ಲಿ ರೂ.58.00 ಗಳಂತೆ ಇರುತ್ತದೆ.

  - ಕಂಡಕ್ಟರ್ ಹಾಗೂ ವಿದ್ಯುತ್ ದರಗಳನ್ನು ಒಳಗೊಂಡಂತೆ ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್ಸುಗಳ ಆಚರಣೆಗೆ ರೂ.60.86 ಪ್ರತಿ ಕಿ.ಮೀ ಹಾಗೂ ಸಾಧಾರಣ ಎಲೆಕ್ಟ್ರಿಕ್ ಬಸ್ಸುಗಳಿಗೆ ರೂ.40.00 ಪ್ರತಿ ಕಿ.ಮೀಗಳಂತೆ ಆಚರಣಾ ದರಗಳು ಆಗುತ್ತದೆ.

  - ಪ್ರಸ್ತುತ ಸಂಸ್ಥೆಯಲ್ಲಿ ಸಾಧಾರಣಾ ಡೀಸೆಲ್ ಬಸ್ಸುಗಳ ಆಚರಣಾ ವೆಚ್ಚವು ಪ್ರತಿ ಕಿ.ಮೀಗೆ ರೂ.55.00 ಹಾಗೂ ಡೀಸೆಲ್ ಹವಾನಿಯಂತ್ರಿತ ಬಸ್ಸುಗಳ ಆಚರಣಾ ವೆಚ್ಚವು ಪ್ರತಿ ಕಿ.ಮೀಗೆ ರೂ.84.00 ಆಗಿರುತ್ತದೆ.

- ಆದ್ದರಿಂದ ಪ್ರತಿ ಕಿ.ಮೀ ಆಚರಣೆಯಿಂದ ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್ಸುಗಳಿಂದ ರೂ.27.43 ರಂತೆ ಹಾಗೂ ಸಾಧಾರಣಾ ಎಲೆಕ್ಟ್ರಿಕ್ ಬಸ್ಸುಗಳಿಂದ ರೂ.15.00 ರಂತೆ ಸಂಭಾವ್ಯ ಉಳಿತಾಯವಾಗುತ್ತವೆ.

- ಪ್ರಸ್ತುತ ಬೆಂ.ಮ.ಸಾ.ಸಂಸ್ಥೆಯಲ್ಲಿ ಡೀಸೆಲ್ ಹವಾನಿಯಂತ್ರಿತ ಬಸ್ಸುಗಳಿಂದ ರೂ.65.56 ಹಾಗೂ ಸಾಧಾರಣಾ ಬಸ್ಸುಗಳಿಂದ ರೂ.49.26 ಪ್ರತಿ ಕಿ.ಮೀನ ಸರಾಸರಿ ಆದಾಯವು ಬರುತ್ತಿದೆ.

- ಆದಾಗ್ಯೂ, ಸಂಸ್ಥೆಯ ಆದಾಯವನ್ನು ವೃದ್ಧಿಗೊಳಿಸಲು ಈ ಎಲೆಕ್ಟ್ರಿಕ್ ಬಸ್ಸುಗಳನ್ನು ದೀರ್ಘಾವಧಿಯ ಮಾರ್ಗಗಳಲ್ಲಿ ಆಚರಣೆಗೊಳಿಸುವುದು ಮುಖ್ಯವಾಗಿರುತ್ತದೆ. ಪ್ರಸ್ತುತ ಹವಾನಿಯಂತ್ರಿತ ಡೀಸೆಲ್ ಬಸ್ಸುಗಳನ್ನು ದೀರ್ಘಾವಧಿ ಮಾರ್ಗಗಳಾದ ವಿಮಾನ ನಿಲ್ದಾಣದ ಮಾರ್ಗಗಳಲ್ಲಿ ಆಚರಣೆಯಿಂದ ಪ್ರತಿ ಕಿ.ಮೀಗೆ ರೂ.88.29 ರಂತೆ ಹಾಗೂ ಸಾಧಾರಣ ಬಸ್ಸುಗಳನ್ನು ದೀರ್ಘಾವಧಿ ಮಾರ್ಗಗಳ ಆಚರಣೆಯಿಂದ ಪ್ರತಿ ಕಿ.ಮೀಗೆ ರೂ.55.00 ಸಾರಿಗೆ ಆದಾಯವು ಲಭ್ಯವಾಗುತ್ತಿದೆ.

ಆದ್ದರಿಂದ, ಎಲೆಕ್ಟ್ರಿಕ್ ಬಸ್ಸುಗಳ ಆಚರಣಾ ವೆಚ್ಚದ ನಿರ್ಧಾರವು ಪ್ರಸ್ತುತ ಸಂಸ್ಥೆಯ ಆಚರಣಾ ವೆಚ್ಚಗಳಿಗಿಂತ ಕಡಿಮೆ ಇರುವುದಲ್ಲದೆ ಉತ್ತಮ ಆದಾಯವನ್ನು ನಿರೀಕ್ಷಿಸಬಹುದಾಗಿದೆ. ಇದಲ್ಲದೆ, ಎಲೆಕ್ಟ್ರಿಕ್ ಬಸ್ಸುಗಳ ಆಚರಣೆಯಿಂದ ವೆಚ್ಚವನ್ನು ಕಡಿಮೆ ಮಾಡುವುದಲ್ಲದೆ ಸಂಸ್ಥೆಗೆ ಹೆಚ್ಚಿನ ಆದಾಯ ಲಭ್ಯವಾಗುತ್ತದೆ ಹಾಗೂ ಪರಿಸರ ಮಾಲಿನ್ಯವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಸಹಕಾರಿಯಾಗಿರುತ್ತದೆ.

04. ಎಲೆಕ್ಟ್ರಿಕ್ ಬಸ್ಸುಗಳ ಆಚರಣೆಯಿಂದ ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್ಸುಗಳಿಂದ ಪ್ರತಿ ಕಿ.ಮೀಗೆ ರೂ.30.00 ರಂತೆ ಹಾಗೂ ಸಾಧಾರಣಾ ಎಲೆಕ್ಟ್ರಿಕ್ ಬಸ್ಸುಗಳಿಂದ ಪ್ರತಿ ಕಿ.ಮೀಗೆ ರೂ.15.00 ರಂತೆ ವೆಚ್ಚವು ಡೀಸೆಲ್ ಬಸ್ಸುಗಳ ಪ್ರಸ್ತುತ ಆಚರಣಾ ವೆಚ್ಚದ ಹೋಲಿಕೆಯಲ್ಲಿ ಕಡಿಮೆಯಾಗುತ್ತಿದ್ದು ವಾರ್ತಾ ವಾಹಿನಿಯಲ್ಲಿ ಪ್ರಸಾರವಾಗಿರುವ ರೂ.600 ಕೋಟಿಗಳ ಅಧಿಕ ವೆಚ್ಚವು ಆಧಾರರಹಿತ ಹಾಗೂ ಎಲೆಕ್ಟ್ರಿಕ್ ಬಸ್ಸುಗಳ ಆಚರಣೆಯು ಸಂಸ್ಥೆಯ ನಷ್ಟದ ಪ್ರಮಾಣವನ್ನು ಅಧಿಕಗೊಳಿಸುತ್ತದೆ ಎಂಬುದು ಬೇಜವಾಬ್ದಾರಿ ವರದಿಯಾಗಿರುತ್ತದೆ. ಈ ರೀತಿಯಾದ ವೆಚ್ಚ ಉಳಿತಾಯವು ಸಂಸ್ಥೆಗೆ ಆಗುತ್ತಿರುವುದರಿಂದ ವಾರ್ತಾ ವಾಹಿನಿಯು ಅಧಿಕಾರಿಗಳಿಂದ ನಷ್ಟದ ಪ್ರಮಾಣವು ಹೆಚ್ಚಾಗುತ್ತದೆ ಎಂದು ಹೇಗೆ ಆಪಾದಿಸುತ್ತದೆ? ಈ ರೀತಿಯಾದ ತಪ್ಪು ಪ್ರಚಾರ ಹಾಗೂ ಸಾರ್ವಜನಿಕರನ್ನು ದಾರಿತಪ್ಪಿಸುವ ವರದಿ ವಾರ್ತಾ ವಾಹಿನಿಯ ದುರುದ್ದೇಶವಲ್ಲದೆ ಇನ್ನೇನು?

05. ಪ್ರತಿಷ್ಠಿತ ಸಂಶೋಧನ ಸಂಸ್ಥೆಯಾದ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಲಾರೆನ್ಸ್ ಬರ್ಕಲೇ ನ್ಯಾಷನಲ್ ಲ್ಯಾಬೋರೇಟರಿ ರವರು ದೇಶದ ಇತರೇ ನಗರಗಳ ಟೆಂಡರ್‌ನಲ್ಲಿ ಲಭ್ಯವಾಗಿರುವ ದರಗಳ ವಿಶ್ಲೇಷಣೆಯನ್ನು ಬೆಂ.ಮ.ಸಾ.ಸಂಸ್ಥೆಯ ಟೆಂಡರ್‌ನಲ್ಲಿ ಲಭ್ಯವಾಗಿರುವ ಹಾಗೂ ಅಂತಿಮಗೊಳಿಸಿರುವ 12 ಮೀ ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್ಸುಗಳ ದರಗಳೊಂದಿಗೆ ಹೋಲಿಕೆಯನ್ನು ಮಾಡಿ ವಿಶ್ಲೇಷಿಸಿ ಇಡೀ ದೇಶದಲ್ಲೇ ಕನಿಷ್ಠವಾದ ದರವು ಬಿಎಂಟಿಸಿಗೆ ಲಭ್ಯವಾಗಿರುವ ಬಗ್ಗೆ ತಿಳಿಯಪಡಿಸುತ್ತದೆ.

06. ಸುಮಾರು ರೂ 2000 ಕೋಟಿ ಬೆಲೆಯುಳ್ಳ ಶಾಂತಿನಗರ ಡಿಪೋವನ್ನು ಖಾಸಗಿಯವರಿಗೆ ಹಸ್ತಾಂತರ ಮಾಡುತ್ತಿರುವುದಾಗಿ ಆರೋಪಿಸಲಾಗಿದೆ. ಈ ಆರೋಪವು ಸತ್ಯಕ್ಕೆ ದೂರವಾಗಿದ್ದು ಶಾಂತಿನಗರ ಡಿಪೋವನ್ನು ಎಲೆಕ್ಟ್ರಿಕ್ ಬಸ್ಸುಗಳ ಆಚರಣಾ ಯೋಜನೆಯಲ್ಲಿ ಸೇರಿರುವುದಿಲ್ಲ. ಆದ್ದರಿಂದ, ರೂ 2000 ಕೋಟಿ ಬೆಲೆಯ ಆಸ್ತಿಯನ್ನು ಖಾಸಗಿಯವರಿಗೆ ಪರಾಬಾರೆ ಮಾಡುವ ಸಂಗತಿಯು ಸಂಪೂರ್ಣವಾಗಿ ಸತ್ಯಕ್ಕೆ ದೂರವಾಗಿರುತ್ತದೆ.

- ವಾರ್ತಾ ವಾಹಿನಿಯಲ್ಲಿ ವರದಿಯಾಗಿರುವಂತೆ ಯಾವುದೇ ಘಟಕ ಅಥವಾ ಭೂಮಿಯನ್ನು ಖಾಸಗಿಯವರಿಗಾಗಲಿ ಆಪರೇಟರ್‌ಗಾಗಲಿ ಯಾವುದೇ ಸಂದರ್ಭದಲ್ಲಿ ಪರಬಾರೆ ಅಥವಾ ಗುತ್ತಿಗೆಯ ಮೇಲೆ ನೀಡಲಾಗುತ್ತಿಲ್ಲ.

- ಸಂಸ್ಥೆಯ ಬಸ್ಸುಗಳನ್ನು ರಸ್ತೆಗಳಲ್ಲಿ ನಿಲುಗಡೆಗೊಳಿಸಿ ದುರಸ್ತಿ ಅಥವಾ ರಿಪೇರಿ ಕಾರ್ಯಗಳನ್ನು ಮಾಡಲು ಆಗುವುದಿಲ್ಲ. ಆದ್ದರಿಂದ ಟೆಂಡರ್‌ನಲ್ಲಿ ಎಲೆಕ್ಟ್ರಿಕ್ ಬಸ್ಸುಗಳ ಆಚರಣೆಗೆ ಅಗತ್ಯವಿರುವ ಛಾರ್ಜಿಂಗ್, ಸ್ವಚ್ಚತಾ ಕಾರ್ಯ ಹಾಗೂ ನಿರ್ವಹಣೆಯನ್ನು ಮಾಡಲು ಘಟಕದ ಆವರಣವನ್ನು ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದ್ದು ಯಾವುದೇ ರೀತಿಯಲ್ಲಿ ಘಟಕ/ಜಾಗದ ಮಾಲೀಕತ್ವವನ್ನು ಖಾಸಗಿಯವರಿಗೆ ವರ್ಗಾವಣೆ ಮಾಡುವ ಷರತ್ತು ಟೆಂಡರ್‌ನಲ್ಲಿ ಇರುವುದಿಲ್ಲ.

07. ಬೆಂ.ಮ.ಸಾ.ಸಂಸ್ಥೆಯ ಯಾವುದೇ ಅಧಿಕಾರಿಯು ಸರ್ಕಾರದೊಂದಿಗೆ ಪತ್ರ ವ್ಯವಹಾರವಾಗಲಿ ಅಥವಾ ಬೇಟಿಯಾಗಲಿ ಮಾಡಿರುವುದಿಲ್ಲ ಹಾಗೂ ಕೇವಲ ಮಾನ್ಯ ಸಾರಿಗೆ ಮಂತ್ರಿಗಳ ಆಹ್ವಾನದ ಮೇಲೆ ಒಂದು ಸಭೆಗೆ ಹಾಜರಾಗಿದ್ದು ಅದರಂತೆ ಕಡತವನ್ನು ಅಂತಿಮ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. ಸರ್ಕಾರದ ಮೇಲೆ ಬೆಂ.ಮ.ಸಾ.ಸಂಸ್ಥೆಯ ಅಧಿಕಾರಿಗಳು ಒತ್ತಡವನ್ನು ಹೇರುತ್ತಿರುವ ಅಂಶವು ಆಧಾರರಹಿತವಾಗಿದ್ದು ಸಂಸ್ಥೆಯ ಅಧಿಕಾರಿಗಳು ಸರ್ಕಾರ ನೀಡುವ ಮಾರ್ಗಸೂಚಿಯಂತೆ ಕಾರ್ಯನಿರ್ವಹಿಸಬೇಕಾಗಿದ್ದು ಸರ್ಕಾರದ ಮುಂದೆ ಅವರುಗಳು ಬಹಳ ಸಣ್ಣವರಾಗಿರುತ್ತಾರೆ. ಅಧಿಕಾರಿಗಳು ಸಮಗ್ರವಾಗಿ ಸರ್ಕಾರದ ಆದೇಶ ಹಾಗೂ ಹತೋಟಿಯಲ್ಲಿ ಇರುವರೇ ವಿನಹ ಅದಕ್ಕೆ ವಿರುದ್ದವಾಗಿ ಅಲ್ಲ.

08. ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯ ಹಾಗೂ ನೀತಿ ಆಯೋಗವು ಬೆಂ.ಮ.ಸಾ.ಸಂಸ್ಥೆಯ ಟೆಂಡರ್‌ನ ಷರತ್ತು ಹಾಗೂ ನಿಬಂಧನೆಗಳ ರೀತಿಯಲ್ಲೇ ಮಾದರಿ ಟೆಂಡರ್ ದಸ್ತಾವೇಜು ಹಾಗೂ ಕರಾರು ಒಪ್ಪಂದದ ಮಾದರಿಯನ್ನು ಹೊರತಂದಿರುತ್ತದೆ. ಈ ದಸ್ತಾವೇಜುಗಳು ಸಾರ್ವಜನಿಕ ಅಧಿಕಾರಕ್ಕೊಳಪಟ್ಟು ಎಲ್ಲರಿಗೂ ಮಾಹಿತಿಗಾಗಿ ಲಭ್ಯವಿರುತ್ತವೆ.

09. ವಾರ್ತಾ ವಾಹಿನಿಯಲ್ಲಿ ಆರೋಪಿಸಿರುವಂತೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ತಮ್ಮ ಮನಸೋಇಚ್ಚೆ ನಿರ್ದಾರಗಳನ್ನು ತೆಗೆದುಕೊಳ್ಳುತ್ತಾ ಒಂದು ರೀತಿಯ 'ದರ್ಭಾರ್' ನಡೆಸುತ್ತಿರುವುದಾಗಿ ತಿಳಿಸಿರುವ ಬಗ್ಗೆ ಸಂಸ್ಥೆಯಲ್ಲಿ ಖರೀದಿಗೆ ಅಗತ್ಯವಿರುವ ಯಾವುದೇ ನಿರ್ಣಯಗಳನ್ನು ಒಪ್ಪಂದಗಳ ನಿರ್ವಹಣೆ ಸಮಿತಿ, (Contract Management Group) ಕೇಂದ್ರ ಖರೀದಿ ಸಮಿತಿ ಹಾಗೂ ಸಂಸ್ಥೆಯ ಮಂಡಳಿ ನಿರ್ದೇಶಕರ ಅನುಮೋದನೆಗೆ ಒಳಪಟ್ಟಿರುತ್ತದೆ ವಿನಹ ಯಾವುದೇ ದುರುದ್ದೇಶದಿಂದ ಕೂಡಿರುವುದಿಲ್ಲವೆಂದು ತಿಳಿಸಲಾಗಿದೆ. 80 ಎಲೆಕ್ಟ್ರಿಕ್ ಬಸ್ಸುಗಳ ಟೆಂಡರ್ ಸಂಬಂಧ ಯುಕ್ತ ಮಾರ್ಗಗಳ ಮೂಲಕ ಪಡೆಯಲಾಗಿರುವ ಅನುಮೋದನೆಯ ಪ್ರತಿಗಳನ್ನು ಅಡಕಗೊಳಿಸಲಾಗಿದೆ.

ಇದಲ್ಲದೇ, ವಿಷಯಕ್ಕೆ ಸಂಬಂಧಿಸಿರುವ ಮಾಹಿತಿಗಳನ್ನು ರುಜುವಾತು ಪಡಿಸಲು ಮಂಡಳಿ ಟಿಪ್ಪಣಿ ಹಾಗೂ ಕಡತಗಳು ಎಲ್ಲರ ವಿಮರ್ಶೆಗಾಗಿ ಲಭ್ಯವಿರುತ್ತವೆ. ವಿಷಯವನ್ನು ತಿಳಿಯಲು ಆಸಕ್ತರಿರುವರು ಅವುಗಳನ್ನು ವಿಮರ್ಶೆಮಾಡಿ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಎಲ್ಲಾ ದಾಖಲೆಗಳನ್ನು ಪಡೆಯಬಹುದಾಗಿದೆ.

ರಾಜ್ಯ ಸಚಿವ ಸಂಪುಟದ ನಿರ್ಣಯ ಹಾಗೂ ಸರ್ಕಾರಿ ಆದೇಶದಂತೆ ಕಾರ್ಯವೆಸಗುವುದನ್ನು ಅಧಿಕಾರಿಗಳ ಧರ್ಬಾರ್ ಎಂದು ವ್ಯಾಖ್ಯಾನಿಸಬಹುದೇ. ವಾರ್ತಾ ವಾಹಿನಿಯ ವರದಿಗಾರರು ಆರೋಪಿಸಿರುವಂತೆ ಯಾವ ರೀತಿಯಲ್ಲಿ ದುರುದ್ದೇಶವಿರುತ್ತದೆ.

10. ಪ್ರಸ್ತುತ ಎಲೆಕ್ಟ್ರಿಕ್ ಬಸ್ಸುಗಳ ಟೆಂಡರ್‌ಗೆ ಸಂಬಂಧಿಸಿದಂತೆ ಎರಡು ಬಾರಿ ಆಸಕ್ತರ ಸಭೆ, ಪ್ರೀಬಿಡ್ ಸಭೆ, ಮಂಡಳಿ ನಿರ್ದೇಶಕರ ಅನುಮೋದನೆ ಹಾಗೂ ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆದಿದ್ದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ನಿರ್ಣಯವೆಂದು ಬಿಂಬಿಸುವುದು ಎಷ್ಟು ಸಮಂಜಸ?

ಮೇಲಿನ ಎಲ್ಲಾ ಪ್ರಕ್ರಿಯೆಯ ದಾಖಲಾತಿಗಳನ್ನು ಅಡಕಗೊಳಿಸಲಾಗಿದೆ.

11. ಎಲೆಕ್ಟ್ರಿಕ್ ಬಸ್ಸುಗಳು ಶೂನ್ಯ ಪರಿಸರ ಮಾಲಿನ್ಯದ ಬಸ್ಸುಗಳಾಗಿದ್ದು ಅವುಗಳನ್ನು ಪರಿಚಯಿಸುವುದು ಒಂದು ಸಾಮಾಜಿಕ ಜವಾಬ್ದಾರಿಯಾಗಿದ್ದು ಅದನ್ನು ದುರುದ್ದೇಶದ ಕ್ರಮವೆಂದು ಆರೋಪಿಸಬಹುದೇ? ಸಾಮಾಜಿಕ ಕಳಕಳಿ ಹಾಗೂ ಉತ್ತಮ ಕ್ರಮಗಳ ಬಗ್ಗೆ ವಾರ್ತಾವಾಹಿನಿಯ ಬೇಜವಾಬ್ದಾರಿಯಾದ ದೋಷಾರೋಪಣೆಯ ವರದಿಯು ಸಮಂಜಸವೇ.

12. ವಾರ್ತಾವಾಹಿನಿಯು ಕರಾರು ಒಪ್ಪಂದಕ್ಕೆ ಅಧಿಕಾರಿಗಳು ಈಗಾಗಲೆ ಸಹಿ ಹಾಕಿರುವುದಾಗಿ ಆರೋಪಿಸಿದ್ದು ಇದು ಸತ್ಯಕ್ಕೆ ದೂರವಾಗಿದ್ದು ಕರಾರು ಒಪ್ಪಂದವು ಇಲ್ಲಿಯವರೆಗೆ ಸಹಿ ಆಗಿರುವುದಿಲ್ಲ ಹಾಗೂ ಸರ್ಕಾರದ ಮಟ್ಟದಲ್ಲಿ ಅನುಮೋದನೆಯ ನಿರೀಕ್ಷಣೆ ಇರುತ್ತದೆ. ಈ ರೀತಿಯಾದ ವರದಿಯಿಂದ ಸಾರ್ವಜನಿಕರನ್ನು ದಾರಿತಪ್ಪಿಸುವುದಲ್ಲದೆ ತಪ್ಪು ಮಾಹಿತಿಗಳನ್ನು ನೀಡುವುದು ವೈಯುಕ್ತಿಕ ವೈಶಮ್ಯದಿಂದ ಕೂಡಿರುತ್ತದೆ. ವಾಹಿನಿಯ ವರದಿಗಾರರು ಇದು ಸಂಸ್ಥೆಯ ಹಿತದೃಷ್ಟಿಗೆ ವಿರುದ್ಧವಾಗಿದೆ ಎಂದು ಸ್ಪಷ್ಟವಾಗಿ ತಿಳಿದಿದ್ದರೂ ವ್ಯವಸ್ಥಾಪಕ ನಿರ್ದೇಶಕರು ಕರಾರು ಒಪ್ಪಂದಕ್ಕೆ ಸಹಿ ಹಾಕಿರುವುದಾಗಿ ಪದೇಪದೇ ಆರೋಪಣೆಯನ್ನು ಮಾಡುತ್ತಾರೆ, ಆದರೆ, ಕರಾರು ಒಪ್ಪಂದಕ್ಕೆ ಸಹಿ ಹಾಕದೆ ಇರುವ ಸನ್ನಿವೇಶದಲ್ಲಿ ಸಂಸ್ಥೆಯ ಹಿತದೃಷ್ಟಿಗೆ ಯಾವ ರೀತಿಯಲ್ಲಿ ವಿರುದ್ದವಾಗಿರುತ್ತದೆ. ಟೆಂಡರ್ ಪ್ರಕ್ರಿಯೆಯ ಸಂಪೂರ್ಣ ಮಾಹಿತಿಗಳನ್ನು ಕೂಲಂಕುಷವಾಗಿ ವಿಮರ್ಶಿಸಿ ನಾಲ್ಕು ಸಾರಿಗೆ ಸಂಸ್ಥೆಗಳನ್ನು ಒಳಗೊಂಡ ಕೇಂದ್ರ ಖರೀದಿ ಸಮಿತಿಯು ಅನುಮೋದಿಸಿರುತ್ತದೆ, ಹಾಗೂ ಸಂಸ್ಥೆಯ ನಿರ್ದೇಶಕ ಮಂಡಳಿ ಮತ್ತು ಕೇಂದ್ರ ಸರ್ಕಾರದ ಭಾರಿ ಕೈಗಾರಿಕಾ ಇಲಾಖೆಯು ಸಹ ಅನುಮೋದನೆಯನ್ನು ನೀಡಿರುತ್ತವೆ. ಈ ಸನ್ನಿವೇಶದಲ್ಲಿ ವಾರ್ತಾ ನಿರೂಪಕರ ಆರೋಪವು ಸಮರ್ಪಕವಲ್ಲ.

13. ಕರಾರು ಒಪ್ಪಂದದಂತೆ ಬಸ್ಸುಗಳನ್ನು ಈಗಾಗಲೆ ತಯಾರಿಸಲಾಗಿದೆ ಎಂಬ ವಾರ್ತಾ ವಾಹಿನಿಯ ವರದಿಯು ಸಂಪೂರ್ಣವಾಗಿ ಸತ್ಯಕ್ಕೆ ದೂರವಾಗಿರುತ್ತದೆ. ಟೆಂಡರ್ ಪ್ರಕ್ರಿಯೆಯು ಪೂರ್ಣಗೊಂಡ ನಂತರದಲ್ಲಿ ಸೇವೆ ಒದಗಿಸುತ್ತಿರುವ ಸಂಸ್ಥೆಗೆ ಎಲೆಕ್ಟ್ರಿಕ್ ಬಸ್ಸುಗಳ ಉತ್ಪಾದನೆಯನ್ನು ಸರ್ಕಾರದ ಅನುಮೋದನೆಯನ್ನು ಪಡೆಯುವವರೆಗೆ ಕೈಗೊಳ್ಳಬಾರದೆಂದು ತಿಳಿಸಲಾಗಿರುತ್ತದೆ. ಸದರಿ ಮಾಹಿತಿಯ ಪತ್ರಗಳನ್ನು ಯಾವುದೇ ವ್ಯಕ್ತಿಯು ಪರಿಶೀಲಿಸಲು ವೆಬ್‌ಸೈಟಿನಲ್ಲಿ ಲಭ್ಯವಿರುತ್ತದೆ. ಈ ಪರಿಸ್ಥಿತಿಯಲ್ಲಿ ವಾಹಿನಿಯು ಯಾವ ಆಧಾರದ ಮೇಲೆ ವ್ಯತಿರಿಕ್ತವಾಗಿ ಮಾಹಿತಿಯನ್ನು ನೀಡಿರುತ್ತದೆ?

14. ವಾರ್ತಾ ವಾಹಿನಿಯು ಬೆಂ.ಮ.ಸಾ.ಸಂಸ್ಥೆಯು ಎಲೆಕ್ಟ್ರಿಕ್ ಬಸ್ಸುಗಳನ್ನು ಆಪರೇಟರ್ (ಸರ್ವಿಸ್ ಪ್ರೊವೈಡರ್) ಪಡೆಯುವ ಜವಾಬ್ದಾರಿಯು ಸಂಸ್ಥೆಯ ಮೇಲೆ ಇರುವುದಾಗಿ ಆರೋಪಿಸಿರುತ್ತದೆ ಆದರೆ, ಬೆಂ.ಮ.ಸಾ.ಸಂಸ್ಥೆಯು ಯಾವುದೇ ಸಂದರ್ಭದಲ್ಲಿ ಬಸ್ಸುಗಳನ್ನು ತನ್ನ ಸುಪರ್ಧಿಗೆ ತೆಗೆದುಕೊಳ್ಳುವುದಿಲ್ಲವೆಂಬ ಅಂಶವನ್ನು ಟೆಂಡರ್‌ನ ಷರತ್ತಿನಲ್ಲಿ ನಮೂದಿಸಲಾಗಿರುವುದರಿಂದ ಸಮರ್ಪಕವಾಗಿ ಎಲೆಕ್ಟ್ರಿಕ್ ಬಸ್ಸುಗಳನ್ನು ಆಚರಣೆ ಮಾಡುವ ಗುರುತರವಾದ ಜವಾಬ್ದಾರಿಯು ಆಪರೇಟರ್ (ಸರ್ವಿಸ್ ಪ್ರೊವೈಡರ್) ಮೇಲೆ ಇರುತ್ತದೆ. ಬೆಂ.ಮ.ಸಾ.ಸಂಸ್ಥೆಯು ಆಪರೇಟರ್ (ಸರ್ವಿಸ್ ಪ್ರೊವೈಡರ್) ಗೆ ಟೆಂಡರ್ ನಿಬಂಧನೆಯಂತೆ ಪ್ರತಿ ಕಿ.ಮೀ ಆದಾರದ ಮೇಲೆ ಮಾತ್ರ ಪಾವತಿಯನ್ನು ಮಾಡುವುದರಿಂದ ಸಂಸ್ಥೆಗೆ ಯಾವುದೇ ರೀತಿಯ ಅಪಾಯಕರ ಅಂಶವು ಇರುವುದಿಲ್ಲ. ಆದಾಗ್ಯೂ ವಾರ್ತಾವಾಹಿನಿಯು ಬೆಂ.ಮ.ಸಾ.ಸಂಸ್ಥೆಯು ಈ ಬಸ್ಸುಗಳನ್ನು ತನ್ನ ಸುಪರ್ಧಿಗೆ ತೆಗೆದುಕೊಳ್ಳುತ್ತದೆ

ಎಂದು ಆರೋಪಿಸುತ್ತದೆ. ಈ ಅರೋಪವು ಸತ್ಯಕ್ಕೆ ದೂರವಾಗಿದ್ದು, ದುರುದ್ದೇಶಪೂರ್ವಕ ಹಾಗೂ ಬೇಜವಾಬ್ದಾರಿ ಮತ್ತು ಸೇಡಿನಿಂದ ಕೂಡಿರುತ್ತದೆ.

15. ವಾರ್ತಾ ವಾಹಿನಿಯು ಆಪರೇಟರ್ (ಸರ್ವಿಸ್ ಪ್ರೊವೈಡರ್) ಮುಂದಿನ ದಿನಗಳಲ್ಲಿ ನ್ಯಾಯಾಲಯದ ಮೂಲಕ ಕರಾರು ಒಪ್ಪಂದದನ್ವಯ ಬೆಂ.ಮ.ಸಾ.ಸಂಸ್ಥೆಯ ಬಸ್ಸುಗಳನ್ನು ತನ್ನ ಸುಪರ್ಧಿಗೆ ತೆಗೆದುಕೊಳ್ಳುವ ಸಾಧ್ಯತೆಯ ಬಗ್ಗೆ ಆರೋಪಿಸಿರುತ್ತದೆ. ಟೆಂಡರ್‌ನ ನಿಬಂಧನೆಯಂತೆ ಬಸ್ಸುಗಳ ಖರೀದಿ, ನಿರ್ವಹಣೆ ಹಾಗೂ ಆಚರಣೆಯ ಸಂಪೂರ್ಣ ಜವಾಬ್ದಾರಿಯು ಆಪರೇಟರ್ (ಸರ್ವಿಸ್ ಪ್ರೊವೈಡರ್) ನ ಮೇಲೆ ಇರುವುದರಿಂದ ಹಾಗೂ ನ್ಯಾಯಾಲಯದ ಮೊರೆ ಹೋಗುವ ಬಗ್ಗೆ ಎಲ್ಲರಿಗೂ ಸಮಾನ ಹಕ್ಕು ಇರುವುದರಿಂದ ತಡೆಯಲಾಗುವುದಿಲ್ಲ. ಈ ನಿಬಂಧನೆಯನ್ನು ಟೆಂಡರ್‌ನಲ್ಲಿ ನಮೂದಿಸಲಾಗಿದ್ದು ಕರಾರು ಒಪ್ಪಂದಕ್ಕೆ ಇಲ್ಲಿಯವರೆಗೆ ಸಹಿಯಾಗಿರುವುದಿಲ್ಲ. ಆದ್ದರಿಂದ ಆರೋಪವು ತಪ್ಪಾಗಿರುವುದಲ್ಲದೆ ದುರುದ್ದೇಶದಿಂದ ಕೂಡಿರುತ್ತದೆ.

16. ವಾಹಿನಿಯು ವ್ಯವಸ್ಥಾಪಕ ನಿರ್ದೇಶಕರ ತಪ್ಪಿನಿಂದ ಸರ್ಕಾರವು ಇಕ್ಕಟ್ಟಿನಲ್ಲಿ ಸಿಲುಕಿರುವುದಾಗಿ ಆರೋಪಿಸಿದ್ದು, ಯಾವುದು ತಪ್ಪು ಹಾಗೂ ಸರ್ಕಾರವು ಯಾವ ರೀತಿ ಇಕ್ಕಟ್ಟಿಗೆ ಸಿಲುಕಿರುತ್ತದೆ? ಎಲೆಕ್ಟ್ರಿಕ್ ಬಸ್ಸುಗಳ ಅಳವಡಿಕೆಯು ಸರ್ಕಾರಕ್ಕೆ ತೊಂದರೆಯನ್ನು ಅಥವಾ ಟೆಂಡರ್‌ನಲ್ಲಿ ಅತಿ ಕನಿಷ್ಠ ದರಗಳು ಲಭ್ಯವಾಗಿರುವುದರಿಂದ ಸರ್ಕಾರಕ್ಕೆ ತೊಂದರೆಯಾಗಿದೆ? ವಾರ್ತಾ ವಾಹಿನಿಯು ತನ್ನ ಬೇಜವಾಬ್ದಾರಿ ವರದಿಯ ಬಗ್ಗೆ ಸೂಕ್ತ ವಿವರಣೆಯನ್ನು ನೀಡಬೇಕಾಗುತ್ತದೆ.

17. ವಾರ್ತಾ ವಾಹಿನಿಯ ನಿರೂಪಕರು ಬೆಂ.ಮ.ಸಾ.ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಸಂಸ್ಥೆಯನ್ನು ತಮ್ಮ ಸ್ವಂತ ಆಸ್ತಿ ಎಂದು ಪರಿಗಣಿಸಿ ತಮ್ಮ ಮನಸೋಇಚ್ಛೆ ಕಾರ್ಯವೆಸಗುತ್ತಿರುವುದಾಗಿ ಆರೋಪಿಸಿರುತ್ತಾರೆ. ಈ ರೀತಿಯಾದ ಆರೋಪವನ್ನು ಯಾವ ಆಧಾರದ ಮೇಲೆ ಮಾಡಲಾಗುತ್ತಿದೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು ನಿಯಮಾವಳಿಗಳಂತೆ ಕಾರ್ಯ ನಿರ್ವಹಿಸಬೇಕಾಗಿದ್ದು ಇಲ್ಲದಿದ್ದಲ್ಲಿ ಸರ್ಕಾರವು ಅವರ ವಿರುದ್ಧ ಸೂಕ್ತ ಕ್ರಮಜರುಗಿಸಬಹುದಾಗಿರುತ್ತದೆ. ವಾರ್ತಾ ವಾಹಿನಿಯು ಈ ರೀತಿಯಾದ ಆರೋಪವನ್ನು ಮಾಡುವಾಗ ಯಾವುದೆ ಒಂದು ಘಟನೆಯನ್ನು ಉಲ್ಲೇಖಿಸದೆ ಮಾಡಿರುತ್ತದೆ?

18. ವಾರ್ತಾ ವಾಹಿನಿಯ ನಿರೂಪಕರು ಶಾಂತಿನಗರ ಡಿಪೋದ ರೂ.2000 ಕೋಟಿ ಬೆಲೆವುಳ್ಳ ಆಸ್ತಿಯನ್ನು ಆಪರೇಟರ್ (ಸರ್ವಿಸ್ ಪ್ರೊವೈಡರ್) ನ ಸುಪರ್ಧಿಗೆ ವರ್ಗಾಯಿಸಲಾಗುವುದು ಹಾಗೂ ಬಸ್ಸುಗಳ ನಿರ್ವಹಣೆಯ ಜವಾಬ್ದಾರಿಯು ಬೆಂ.ಮ.ಸಾ.ಸಂಸ್ಥೆಗೆ ಇರುತ್ತದೆಂದು ಆರೋಪಿಸಿರುತ್ತಾರೆ. ಎಲೆಕ್ಟ್ರಿಕ್ ಬಸ್ಸುಗಳ ಆಚರಣೆಯು ಶಾಂತಿನಗರ ಡಿಪೋದ ವ್ಯಾಪ್ತಿಗೆ ಬರದೆ ಇರುವುದರಿಂದ ಈ ಆರೋಪವು ಆಧಾರ ರಹಿತವಾಗಿರುತ್ತದೆ. ಇದಲ್ಲದೆ ಆಪರೇಟರ್ (ಸರ್ವಿಸ್ ಪ್ರೊವೈಡರ್) ಗೆ ಬಸ್ಸುಗಳನ್ನು ನಿಲುಗಡೆ, ಛಾರ್ಜಿಂಗ್ ಹಾಗೂ ನಿರ್ವಹಣೆಗಾಗಿ ಘಟಕದಲ್ಲಿ ಸ್ಥಳ ನೀಡುತ್ತಿದ್ದು ಯಾವುದೆ ಘಟಕಗಳನ್ನು ಅವರಿಗೆ ಹಸ್ತಾಂತರಿಸುವುದಿಲ್ಲ ಹಾಗೂ ಮಾಲಿಕತ್ವವನ್ನು ನೀಡುವುದಿಲ್ಲ. ವರದಿಗಾರರು ಸಾರ್ವಜನಿಕ ಸಂಸ್ಥೆಯು ಕಾನೂನಿನ ಚೌಕಟ್ಟಿನಲ್ಲಿ ಕಾರ್ಯವೆಸಗುತ್ತಿರುವ ಬಗ್ಗೆ ಕಿಂಚಿತ್ತು ಮಾಹಿತಿಯನ್ನು ಪಡೆದುಕೊಳ್ಳದೆ ಆಧಾರ ರಹಿತ ಆರೋಪವನ್ನು ಮಾಡಿರುತ್ತಾರೆ.

ವರದಿಗಾರರು ಸಂಸ್ಥೆಯ ರೂ.650 ಕೋಟಿಗಳ ನಷ್ಟದ ಪ್ರಮಾಣವು ದ್ವಿಗುಣಗೊಂಡು ರೂ.1200 ಕೋಟಿಗಳಿಗೆ ಹೆಚ್ಚಾಗುವ ಬಗ್ಗೆ ಆರೋಪಿಸಿದ್ದು ಇದು ಸಹ ಆಧಾರ ರಹಿತ ಆರೋಪವಾಗಿದ್ದು ಪ್ರಸ್ತುತ ಯೋಜನೆಯಿಂದ ನಷ್ಟದ ಪ್ರಮಾಣವನ್ನು ಕಡಿಮೆಗೊಳಿಸಬಹುದಾಗಿದೆ.

19. ಮಾನ್ಯ ಮಂತ್ರಿಗಳ ಹೇಳಿಕೆಯನ್ನು ವಾರ್ತಾ ವಾಹಿನಿಯು ಸಂಪೂರ್ಣವಾಗಿ ತಿರುಚಿದ್ದು ಮಂತ್ರಿಗಳು ವ್ಯವಸ್ಥಾಪಕ ನಿರ್ದೇಶಕರು ಸೂಕ್ತ ರೀತಿಯಲ್ಲಿ ತಯಾರಿರುವುದಿಲ್ಲವೆಂದು ಹಾಗೂ ವಿಷಯವು ಅವರು ಮಂತ್ರಿಯಾಗುವುದಕ್ಕೆ

ಮುನ್ನ ನಿರ್ಧರಿಸಿರುವುದು ಎಂಬ ವಿವರಣೆಯನ್ನು ವಾಹಿನಿಯು ರೆಕ್ಕೆಗಳನ್ನು ಕಟ್ಟಿ ಅನಗತ್ಯ ಹಾಗೂ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧಿಕಾರಿಗಳ ಮೇಲೆ ಆರೋಪವನ್ನು ಮಾಡಿರುತ್ತದೆ. ಈ ಆರೋಪವು ಮಾಹಿತಿಗಳನ್ನು ಸರಿಯಾಗಿ ಪರಾಮರ್ಶಿಸದೆ ಮಾಡಲಾಗಿರುತ್ತದೆ. ಯಾವುದೆ ವ್ಯಕ್ತಿಯ ಹೇಳಿಕೆಯನ್ನು ಪ್ರಸಾರ ಮಾಡುವುದು ವಾಕ್ ಸ್ವಾತಂತ್ರ್ಯಕ್ಕೆ ಅನುಗುಣವಾಗಿದ್ದರೂ ಸಹ ಹೇಳಿಕೆಯನ್ನು ತಿರುಚುವುದು ಹಾಗೂ ತಮ್ಮ ಅನುಕೂಲಕ್ಕೆ ತಕ್ಕಂತೆ ನಿರ್ಧಾರಕ್ಕೆ ಬರುವಂತೆ ತೀರ್ಮಾನಿಸುವುದು ಹಾಗೂ ಸತ್ಯವನ್ನು ಮರೆಮಾಚಿ ಪ್ರಸಾರ ಮಾಡುವುದು ವಾರ್ತಾ ವಾಹಿನಿಯ ಬೇಜವಾಬ್ದಾರಿ ಕಾರ್ಯವಾಗಿರುತ್ತದೆ.

20. ವಾರ್ತಾ ವಾಹಿನಿಯು ವ್ಯವಸ್ಥಾಪಕ ನಿರ್ದೇಶಕರು ಟೆಂಡರ್ ನಿಬಂಧನೆಗಳು ಬೆಂ.ಮ.ಸಾ.ಸಂಸ್ಥೆಯ ಮೇಲೆ ಎಲ್ಲಾ ಅಪಾಯಕಾರಿ ಅಂಶಗಳು ಒದಗುವಂತೆ ರಚಿಸಲಾಗಿರುವುದಾಗಿ ಆರೋಪಿಸಿರುತ್ತಾರೆ. ಇದು ಸಹ ದುರುದ್ದೇಶಪೂರ್ವಕವಾಗಿ ಹಾಗೂ ಸಂಪೂರ್ಣ ತರ್ಕಬದ್ಧವಲ್ಲದ ವರದಿಯಾಗಿದ್ದು ಟೆಂಡರ್‌ನ ನಿಬಂಧನೆಗಳನ್ನು ಒಪ್ಪಂದಗಳ ನಿರ್ವಹಣೆ ಸಮಿತಿ, (Contract Management Group) ಯು ಎರಡು ಸಭೆಗಳ ಮೂಲಕ ಅಂತಿಮಗೊಳಿಸಿರುತ್ತದೆ. ಮುಂದುವರೆದು, ವಾರ್ತಾ ವಾಹಿನಿಯ ವರದಿಗಾರರ ಆರೋಪಕ್ಕೆ ವಿರುದ್ಧವಾಗಿ ಶೇ.100 ರಷ್ಟು ಜವಾಬ್ದಾರಿಯನ್ನು ಟೆಂಡರ್ ಷರತ್ತಿನಂತೆ ಆಪರೇಟರ್ (ಸರ್ವಿಸ್ ಪ್ರೊವೈಡರ್) ಗೆ ವಹಿಸಲಾಗಿದೆ. ಈ ರೀತಿಯಾದ ದೋಷಾರೋಪಣೆಯನ್ನು ಕೇವಲ ಉದ್ದೇಶಪೂರ್ವಕ ಹಾಗೂ ತಪ್ಪಾದ ಮಾಹಿತಿಗಳನ್ನು ಸ್ಪಷ್ಟವಾಗಿರುವುದಾಗಿ ವರದಿಗಾರರು ತಿಳಿಸಿರುವುದು ನೂರು ಪ್ರತಿಶತ ಸತ್ಯಕ್ಕೆ ವಿರುದ್ಧವಾಗಿರುತ್ತದೆ.

21. ವ್ಯವಸ್ಥಾಪಕ ನಿರ್ದೇಶಕರು ಮಾನ್ಯ ಮಂತ್ರಿಗಳ ಗಮನಕ್ಕೆ ವಿಷಯವನ್ನು ತರದೆ ಮುಂದುವರೆದಿರುವುದರಿಂದ ಸರ್ಕಾರವನ್ನು ಇಕ್ಕಟ್ಟಿನ ಪರಿಸ್ಥಿಗೆ ಸಿಲುಕಿಸಿರುವುದಲ್ಲದೆ ಇಲ್ಲಿಯವರೆಗೆ ಕರಾರಿನ ಯಾವುದೇ ಅಂಶವನ್ನು ಅನುಷ್ಠಾನಗೊಳಿಸದೆ ಪೂರ್ಣ ಕಡತವನ್ನು ಎಲ್ಲಾ ಮಾಹಿತಿ ಹಾಗೂ ದಾಖಲೆಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸಿರುವುದಾಗಿ ವರದಿಗಾರರು ಆರೋಪಿಸಿರುತ್ತಾರೆ. ಈ ರೀತಿಯಾದ ಆರೋಪವು ಖಂಡನೀಯವಲ್ಲದೆ ಯಾವುದೇ ವ್ಯಕ್ತಿಯ ಚಾರಿತ್ರಿಕ ವಧೆ ಮಾಡುವ ಉದ್ದೇಶದಿಂದ ಮಾಡಲಾಗಿರುತ್ತದೆ.

22. ಈ ವಿಷಯಗಳ ಬಗ್ಗೆ ಮಾಹಿತಿಯನ್ನು ಬಯಸುವ ನಾಗರಿಕರಿಗೆ ಸಮಗ್ರವಾಗಿ ವಿಷಯವನ್ನು ತಿಳಿಸುವ ಉದ್ದೇಶದಿಂದ ಹಾಗೂ ನೀಡಿರುವ ಮಾಹಿತಿಯನ್ನು ತಿಳಿದುಕೊಂಡು ಹೆಚ್ಚಿನ ಮಾಹಿತಿಯ ಅವಶ್ಯಕತೆ ಹಾಗೂ ಎಲೆಕ್ಟ್ರಿಕ್ ಬಸ್ಸಿನ ಟೆಂಡರ್‌ಗೆ ಸಂಬಂದಿಸಿದ ಎಲ್ಲಾ ದಾಖಲೆಗಳನ್ನು ಮಾಹಿತಿ ಹಕ್ಕು ಅಧಿನಿಯಮದ ಅನ್ವಯ ಪಡೆದುಕೊಳ್ಳಲು ಸಹ ಅವಕಾಶವಿರುತ್ತದೆ.

23. ಪ್ರಸ್ತುತ ಪ್ರಕರಣದಿಂದ ಬೆಂ.ಮ.ಸಾ.ಸಂಸ್ಥೆಯು ಯಾವುದೇ ರೀತಿಯ ಹೆಚ್ಚುವರಿ ಹಿರಿಮೆಯನ್ನು ಹೊಂದದೆ ದಾಖಲಾತಿಗಳನ್ನು ಪಡೆದುಕೊಳ್ಳಲು ಮಾಹಿತಿ ಹಕ್ಕು ಅಧಿನಿಯಮವನ್ನು ಸರಳವಾಗಿ ಉಪಯೋಗಿಸಿಕೊಳ್ಳಲು ಪುನರುಚ್ಚರಿಸುತ್ತದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**
**ಬೆಂ.ಮ.ಸಾ.ಸಂಸ್ಥೆ**